**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ, ಕಡೂರು.**

**ಸಿ.ಸಿ. ಸಂಖ್ಯೆ.3401/2022**

ಪಿರ್ಯಾದುದಾರರು ಃ ಸರ್ಕಾರದ ಪರವಾಗಿ ಸಖರಾಯಪಟ್ಟಣ ಪೊಲೀಸರು

-ವಿರುದ್ಧ-

ಆರೋಪಿತರು ಃ ಜೀವನ್ ಬಿ.ಜಿ. ಮತ್ತು ಇತರರು

## ದೋಷಾರೋಪಣೆ

ಶ್ರೀಮತಿ ಸವಿತರಾಣಿ ಹೆಚ್.ವಿ., ಬಿ.ಎ.ಎಲ್., ಎಲ್.ಎಲ್.ಬಿ., 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಡೂರು ಆದ ನಾನು ಈ ಕೆಳಗೆ ಕಾಣಿಸಿರುವಃ

1. ಜೀವನ್ ಬಿ.ಜಿ., ಬಿನ್ ಗುರುಮೂರ್ತಿ, 34 ವರ್ಷ,
   ಕಾರು ಚಾಲಕ, ವಾಸಃ ಮನೆ ನಂ.820, 6 ನೇ ತಿರುವು,
   10 ನೇ ಮುಖ್ಯರಸ್ತೆ, ಮಹದೇಶ್ವರ ಬಡಾವಣೆ,
   ಮೈಸೂರು ನಗರ, ಸ್ವಂತ ವಾಸ ಃ ಎಸ್.ಬಿದರೆ ಗ್ರಾಮ,
   ಕಡೂರು ತಾಲ್ಲೂಕು.

2. ಗುರುಮೂರ್ತಿ, ಬಿನ್ ಲೇಟ್ ರಂಗಶೆಟ್ಟಿ, 68 ವರ್ಷ,
   ಎಳೆನೀರು ವ್ಯಾಪಾರಿ.
   **( ಮೃತಪಟ್ಟಿರುತ್ತಾರೆ )**

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಮಾಡುವುದೇನೆಂದರೆಃ

ಮೊದಲನೆಯದಾಗಿ ಕಡೂರು ತಾಲ್ಲೂಕು, ಸಖರಾಯಪಟ್ಟಣ ಠಾಣಾ ವ್ಯಾಪ್ತಿಯ ಎಸ್.ಬಿದರೆ ಚಾಸಾ-1 ಶ್ರೀಮತಿ ಸುಶ್ಮಿತಾ ಇವರ ವಿವಾಹವು ದಿನಾಂಕಃ 03.11.2019 ರಂದು ಹಿಂದೂ ಸಂಪ್ರದಾಯದಂತೆ ಚಿಕ್ಕಮಗಳೂರಿನ ನಿಸರ್ಗ ಕಲ್ಯಾಣ ಮಂಟಪದಲ್ಲಿ ನಡೆದಿದ್ದು, ಮದುವೆಯ ನಂತರ ಆರೋಪಿಯು ಪ್ರತಿನಿತ್ಯ ಮಧ್ಯಪಾನ ಮಾಡಿಕೊಂಡು ಬಂದು ಚಾಸಾ-1 ರವರಿಗೆ ನೀನು ತುಂಬಾ ತೆಳ್ಳಗಿದ್ದೀಯಾ, ನಿನ್ನಿಂದ ನನಗೆ ಸಂಸಾರಿಕ ಸುಖ ಸಿಗುತ್ತಿಲ್ಲವೆಂದು ಹೀಯಾಳಿಸುತ್ತಾ ತಾನು ಹೇಳಿದಂತೆ ಕೇಳುವಂತೆ ಹಿಂಸೆ ನೀಡುತ್ತಿದ್ದು, ಹಾಗೂ ಕರೋನಾ ಲಾಕ್ ಡೌನ್ ಸಮಯದಲ್ಲಿ ಕೆಫೆಯಲ್ಲಿ ನಷ್ಟವಾಗಿದ್ದರಿಂದ ಸಾಲವನ್ನು ತೀರಿಸಲು ಚಾಸಾ-1 ರವರಿಗೆ ತನ್ನ ತವರು ಮನೆಯಿಂದ ರೂ.15,00,000/- ಹಣವನ್ನು ಸಾಲದ ರೂಪದಲ್ಲಿ ಪಡೆದುಕೊಂಡು ತಂದು ನೀಡುವಂತೆ ವಿನಾಕಾರಣ ಚಾಸಾ-1 ರವರಿಗೆ ದೈಹಿಕ ಮತ್ತು ಮಾನಸಿಕ ಹಿಂಸೆಯನ್ನು ನೀಡಿರುತ್ತೀರಿ. ಆದ್ದರಿಂದ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆಯ ಕಲಂ 498(ಎ)ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ ದಿನಾಂಕಃ 29.12.2020 ರಂದು ಆರೋಪಿಯಾದ ನೀವು ಚಾಸಾ-1 ರವರನ್ನು ಎಸ್. ಬಿದರೆ ಗ್ರಾಮಕ್ಕೆ ಕರೆದುಕೊಂಡು ಬಂದು ಯಾರಿಗೂ ಹೇಳದೆ ಬಿಟ್ಟು ಹೋದ ನಂತರ ದಿಃ 03.01.2021 ರಂದು ಚಾಸಾ 1 ರವರು ಚಾಸಾ -6 ಮತ್ತು 9 ರವರನ್ನು ಕರೆದುಕೊಂಡು ಆರೋಪಿಯಾದ ನೀವು ವಾಸವಿದ್ದ ಮೈಸೂರಿನ ಮನೆಗೆ ಹೋದ ಸಮಯದಲ್ಲಿ ಆರೋಪಿಯಾದ ನೀವು ಚಾಸಾ -1 ರವರನ್ನು ಮನೆಯೊಳಗೆ ಸೇರಿಸದೆ ನೀನು ನಮ್ಮ ಮನೆಯಲ್ಲಿರುವ ಯೋಗ್ಯತೆ ನಿನಗಿಲ್ಲವೆಂದು ಅವಾಚ್ಯ ಶಬ್ಧಗಳಿಂದ ಬೈದು ಸಾರ್ವಜನಿಕ ನೆಮ್ಮದಿಗೆ ಭಂಗ ಉಂಟು ಮಾಡಿದ್ದು, ಆದ್ದರಿಂದ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆಯ ಕಲಂ 504 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೂರನೇಯದಾಗಿ ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ-1 ರವರನ್ನು ಮನೆಯಿಂದ ಹೊರಗೆ ತಳ್ಳಿ, ಚಾಸಾ -1 ರವರ ಕೆನ್ನೆಗೆ ಹೊಡೆದಿದ್ದು , ಆದ್ದರಿಂದ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆಯ ಕಲಂ 323 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಕೊನೆಯದಾಗಿ ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿಯಾದ ನೀವು ಅಪರಾಧಿಕ ಕೃತ್ಯ ಎಸಗುವ ಉದ್ದೇಶದಿಂದ ಬಂದು ಚಾಸಾ-1 ರವರನ್ನು ಕುರಿತು ಇವತ್ತು ನೀನು ಬದುಕಿದ್ದೀಯಾ, ಮುಂದೆ ಇನ್ನೊಂದು ದಿನ ನಿನಗೆ ಜೀವ ಸಹಿತ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿರುತ್ತೀರಿ, ಆದ್ದರಿಂದ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆಯ ಕಲಂ 506 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

1. ನಿಮಗೆ ಈಗ ಓದಿ ಹೇಳಿದ ಆರೋಪವು ತಿಳಿಯಿತೆ?

ಉತ್ತರಃ ಹೌದು

2. ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಉತ್ತರಃ ವಿಚಾರಣೆಯಾಗಬೇಕು

ದಿನಾಂಕಃ 6 ನೇ ಜನವರಿ ಮಾಹೆ 2025.

ಸಹಿ/-

(ಸವಿತರಾಣಿ ಹೆಚ್.ವಿ.)

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕಡೂರು.